# ಸಂತ ರವಿದಾಸ

'ಮನ್ ಚಂಗಾ ತೋ ಕಠೋತಿ ಮೇ ಗಂಗಾ' ಮಧ್ಯಕಾಲೀನ ಭಕ್ತಿ ಮಾರ್ಗದ ಸಂತ ಕವಿ ರವಿದಾಸ ಅಥವಾ ರೈದಾಸರ ದೋಹೆಯೊಂದರ ಸಾಲಿದು. ಮನಸ್ಸು ಶುದ್ಧವಾಗಿದ್ದರೆ ಚಪ್ಪಲಿ ನೆನೆಸುವ ಪಾತ್ರೆಯಲ್ಲಿಯೂ ಗಂಗೆ ಹರಿಯುತ್ತಾಳೆ. ಗಂಗೆ ಎಷ್ಟು ಪವಿತ್ರಳೋ ಅಷ್ಟೇ ಪವಿತ್ರವಾಗಿರಬೇಕಾದುದು ನಮ್ಮ ಮನಸ್ಸು ಎನ್ನುತ್ತಾರೆ ರೈದಾಸ. ಫೆಬ್ರುವರಿ 1 ರಂದು ಅವರ ಅವರ ಜಯಂತಿ ಆಚರಿಸಲಾಗುತ್ತದೆ. ಮಾಘ ಪೂರ್ಣಿಮೆಯಂದು ರವಿದಾಸರು ವಾರಣಸಿಯ ಸಮೀಪ ಸೀರ್ ಗೋರ್ಧನಪುರದಲ್ಲಿ 15ನೇ ಶತಮಾನದ ಮಧ್ಯಭಾಗದಲ್ಲಿ ಜನಿಸಿದರು. ಇದೀಗ ಅವರ 649ನೇ ಜಯಂತಿಯನ್ನು ದೇಶವ್ಯಾಪಿ ಆಚರಿಸಲಾಗುತ್ತಿದೆ. ಚಮ್ಮಾರ ಜನಾಂಗದಲ್ಲಿ ಸಂತೋಖಾ ದಾಸ್, ಕಲ್ಸಾದೇವಿ ದಂಪತಿಗೆ ಜನಿಸಿದ ಇವರು ಜಾತಿ ವ್ಯವಸ್ಥೆಯ ವಿರುದ್ಧ ಸುದೀರ್ಘ ಹೋರಾಟ ಮಾಡಿದರಲ್ಲದೆ ಭಾರತೀಯ ಸನಾತನ ತೀರ್ಮಾನದಲ್ಲಿನ ಅಪಸವ್ಯಗಳನ್ನು ನಿರಾಕರಿಸಿ ನಿಜದ ಪಾರಮಾರ್ಥಿಕ ನೆಲೆಗಳನ್ನು ಎತ್ತಿ ತೋರಿಸಿದರು. ಭಕ್ತಿ ಎಂಬುದಕ್ಕೆ ಹೊಸ ಭಾಷ್ಯವನ್ನು ಬರೆದರು.

ಚಪ್ಪಲಿ ಹೊಲಿಯುವ ಕಾಯಕ ಮಾಡಿಕೊಂಡಿದ್ದ ರೈದಾಸರ ಬಳಿ ಬ್ರಾಹ್ಮಣ ಪಂಡಿತನೊಬ್ಬ ತನ್ನ ಹರಿದ ಚಪ್ಪಲಿ ಹೊಲಿಸಿಕೊಳ್ಳಲು ಬರುತ್ತಾನೆ. ರೈದಾಸರನ್ನು ಕುರಿತು ಬೇಗನೆ ಚಪ್ಪಲಿ ಹೊಲಿದು ಕೊಡಬೇಕು. ತಾನು ಹರಿದ್ವಾರದಲ್ಲಿ ನಡೆಯುವ ಕುಂಭಮೇಳಕ್ಕೆ ಹೋಗುವುದಾಗಿ ಹೇಳುತ್ತಾನೆ. ರೈದಾಸರು ತ್ವರಿತ ಚಪ್ಪಲಿ ಹೊಲಿಯುತ್ತಲೆ ತಾನೂ ಕುಂಭ ಮೇಳಕ್ಕೆ ಬರಬಹುದೆ? ಗಂಗಾ ನದಿಯಲ್ಲಿ ಮೀಯಬಹುದೆ ಎಂದು ಕೇಳಿದಾಗ; ಪಂಡಿತ ಕೀಳು ಕುಲದವರಿಗೆ ಗಂಗಾಸ್ನಾನಕ್ಕೆ ಅವಕಾಶವಿಲ್ಲ. ಅವರಿಂದ ಗಂಗೆ ಮೈಲಿಗೆಯಾಗುತ್ತಾಳೆ. ಚಪ್ಪಲಿ ಹೊಲಿಯುವ ನೀವು ಪಾಪಿಷ್ಟರು ಎಂದು ತುಚ್ಛೀಕರಿಸುತ್ತಾನೆ. ಮೌನವಾಗುವ ರೈದಾಸ ಚೊಕ್ಕವಾಗಿ ಚಪ್ಪಲಿ ಹೊಲಿದು ಕೊಡಲು ಆತ ಒಂದು ನಾಣ್ಯವನ್ನು ಕೂಲಿಯಾಗಿ ನೀಡಲು ಮುಂದಾಗುತ್ತಾನೆ. ರೈದಾಸ ಆ ಹಣವನ್ನು ತಮ್ಮ ಪರವಾಗಿ ಗಂಗಾಮಾಯಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತಾರೆ. ಗಂಗೆಯಲ್ಲಿ ದುಡ್ಡು ಎಸೆಯುವುದಲ್ಲ. ನೀವು ನನ್ನ ಹೆಸರು ಹೇಳಿ ಗಂಗೆಯನ್ನು ಕರೆಯಿರಿ ಅವಳು ಕೈ ಚಾಚುತ್ತಾಳೆ ನಂತರ ಅವಳ ಕೈಯಲ್ಲಿ ದುಡ್ಡು ನೀಡಿ ಎಂದು ಹೇಳಿ ಕಳಿಸುತ್ತಾರೆ. ಇವರ ಮಾತು ಕೇಳಿ ಪಂಡಿತ ವ್ಯಂಗ್ಯವಾಗಿ ನಕ್ಕು ತೆರಳುತ್ತಾನೆ. ರವಿದಾಸರ ಆಣತಿಯಂತೆ ಗಂಗೆಯನ್ನು ಕರೆಯಲಾಗಿ ಸಲೀಲ ಸರೋವರ ಮಧ್ಯದಿಂದ ರತ್ನಖಚಿತ ಸುಂದರ ಕರವೊಂದು ಚಾಚಿಕೊಂಡು ರೈದಾಸ ನೀಡಿದ ದುಡ್ಡು ಪಡೆದು ಅತ್ಯಂತ ಬೆಲೆಯುಳ್ಳ ವಜ್ರ, ಮುತ್ತು, ಹವಳ ಖಚಿತ ಬಳೆಯೊಂದನ್ನು ನೀಡಿ ಇದನ್ನು ರೈದಾಸರಿಗೆ ತಲುಪಿಸಬೇಕೆಂದು ಹೇಳಿ ಅದೃಶ್ಯವಾಗುತ್ತದೆ. ಪಂಡಿತ, ರವಿದಾಸರಿಗೆ ತಲುಪಿಸದೆ ಅದನ್ನು ಮಾರಲು ನಿಶ್ಚಯಿಸುತ್ತಾನೆ.

ತನ್ನೂರಿಗೆ ಬಂದವನೆ ಬಳೆಯನ್ನು ಮಾರಲೆಂದು ಚಿನಿವಾರನ ಅಂಗಡಿಗೆ ತೆಗೆದುಕೊಂಡು ಹೋಗುತ್ತಾನೆ. ಜೀವಮಾನವಿಡೀ ಇಂಥ ಅಪರೂಪದ ಒಡವೆ ಕಂಡಿರದ ವ್ಯಾಪಾರಿ ಗಾಬರಿಯಾಗುತ್ತಾನೆ. ಈತ ಕಳುವು ಮಾಡಿರಬಹುದು. ಇಂಥ ಒಡವೆ ನನ್ನಲ್ಲಿ ಇದೆ ಎಂಬುದು ಪತ್ತೆಯಾದರೆ ರಾಜರು ತನ್ನನ್ನು ಶಿಕ್ಷಿಸಬಹುದೆಂದು ರಾಜನಿಗೆ ಕೊಡುತ್ತಾನೆ. ರಾಜನ ಬಳಿಯಿದ್ದ ಅಪರೂಪದ ಬಳೆಯನ್ನು ನೋಡಿ ಮೋಹಿತಳಾದ ರಾಣಿ ತನಗೆ ಅದರ ಜೊತೆ ಇನ್ನೊಂದು ಅಂಥ ಬಳೆ ಬೇಕೆಂದು ಹಟ ಹಿಡಿಯುತ್ತಾಳೆ. ವ್ಯಾಪಾರಿಯ ಬಳಿ ಅಂಥ ಇನ್ನೊಂದು ಬಳೆ ಇರಲು ಸಾಧ್ಯವೆ? ಆತನನ್ನು ಕರೆದು ವಿಚಾರಿಸಲಾಗಿ ಆತ ಪಂಡಿತನ ಬಳಿಯಿಂದ ಪಡೆದುದಾಗಿ ಇನ್ನೊಂದು ಬಳೆ ಪ್ರಾಯಶಃ ಅವನ ಬಳಿಯೆ ಇರಬೇಕೆಂದು ವಿನಂತಿಸುತ್ತಾನೆ. ಆಗ ರಾಜ ಪಂಡಿತನನ್ನು ಕರೆದು ವಿಚಾರಿಸಲಾಗಿ ಶಿಕ್ಷೆಗೆ ಹೆದರಿ ಇದ್ದ ಹಕೀಕತ್ತನ್ನು ಹೇಳಿ ಗಂಗಾ ಮಾತೆ ಇದನ್ನು ರವಿದಾಸರಿಗೆ ಕೊಡುವಂತೆ ಹೇಳಿ ತನಗೆ ನೀಡಿದುದಾಗಿ ವಿವರಿಸುತ್ತಾನೆ. ಇದನ್ನು ಕೇಳಿ ಚಕಿತನಾದ ರಾಜನು ರವಿದಾಸರ ವ್ಯಕ್ತಿತ್ವದಿಂದ ಪ್ರಭಾವಿತನಾಗಿ ಅಂಥ ಮಹಾತ್ಮನೊಬ್ಬ ತನ್ನ ರಾಜ್ಯದಲ್ಲಿ ಇರಬೇಕಾದರೆ ತಾನು ಆತನ ದರ್ಶನ ಚಮ್ಮಾರನ ಅಂಗಳಕ್ಕೆ ಬರುತ್ತಾನೆ. ರವಿದಾಸ ಎಂದಿನಂತೆ ಚಪ್ಪಲಿ ಹೊಲಿಯುವ ಕಾಯಕದಲ್ಲಿ ನಿರತನಾಗಿರುತ್ತಾನೆ. ರಾಜನು ರವಿದಾಸನಿಗೆ ನಮಸ್ಕರಿಸಿ ನೀವು ಅದ್ವೇಗೆ ಗಂಗೆಯನ್ನು ಒಲಿಸಿಕೊಂಡಿರಿ. ಗಂಗೆ ನಿಮ್ಮ ಮಾತನ್ನು ಕೇಳುತ್ತಾಳೆ ಎಂಬುದಕ್ಕೆ ಸಾಕ್ಷಿಯಾದರೂ ತೋರಿಸಿ ಎಂದು ದುಂಬಾಲು ಬೀಳುತ್ತಾನೆ. ರವಿದಾಸ ಮರು ಮಾತಾಡದೆ ತಾವು ಚಪ್ಪಲಿ ಹೊಲಿಯಲೆಂದು ಇಟ್ಟುಕೊಂಡಿದ್ದ ಕಲ್ಲು ಚಪ್ಪಡಿಯನ್ನು ಎತ್ತಿ ಇಡಲಾಗಿ ಅದರ ಕೆಳಗೆ ಗಂಗೆ ಪ್ರವಹಿಸಲು ತೊಡಗುತ್ತಾಳೆ. ಅಲ್ಲಿದ್ದವರೆಲ್ಲ ಗಂಗೆಯನ್ನು ನೋಡಿ ಪುನೀತರಾದರು ಎಂಬ ಕಥೆಯನ್ನು ಅನೂಚಾನವಾಗಿ ಹೇಳಿಕೊಂಡು ಬರಲಾಗುತ್ತಿದೆ.

ಇದಕ್ಕೆ ಉಪಸ್ತಂಭಕವಾಗಿ 'ಮನ್ ಚಂಗಾ ತೋ ಕಠೋತಿ ಮೇ ಗಂಗಾ' ಎಂಬ ಅವರ ದೋಹೆಯನ್ನು ಹೇಳಿಕೊಂಡು ಬರಲಾಗುತ್ತಿದೆ.

ಚಮ್ಮಾರನಾಗಿದ್ದ ರವಿದಾಸ ತಮ್ಮ ಶುದ್ಧ ನಡೆ ಮತ್ತು ತರ್ಕಬದ್ಧ ನುಡಿಯಿಂದಾಗಿ ಬಹು ದೊಡ್ಡ ಸಂತರಾಗಿ ಅರಳಿದ್ದರಲ್ಲದೆ ಜಾತಿ, ವರ್ಗ ತಾರತಮ್ಯಗಳ ವಿರುದ್ಧ ಸಾತ್ವಿಕ ಸಂಘರ್ಷವನ್ನು ಸಾರಿದ್ದರು. ಇವರು ಬ್ರಜ್, ಅವಧಿ ಮತ್ತು ಹಿಂದಿ ಭಾಷೆಯಲ್ಲಿ ದೋಹೆ ಮತ್ತು ಪದಗಳನ್ನು ರಚಿಸಿದ್ದಾರೆ. ಇವರ ಒಟ್ಟು ಸಾಹಿತ್ಯವನ್ನು ಸಂಗ್ರಹಿಸಿ 'ರವಿದಾಸ ವಾಣಿ' ಎಂದು ಕರೆಯಲಾಗುತ್ತದೆ. ನಿಷ್ಕಾಮ ಭಕ್ತಿ, ಸಮಾನತೆ ಮತ್ತು ಮಾನವೀಯ ಮೌಲ್ಯಗಳು ಇವರ ಸಾಹಿತ್ಯದ ಜೀವಾಳವಾಗಿವೆ. ಉತ್ತರದ ಬಹುಮುಖ್ಯ ಸಂತೆ ಎಂದು ಖ್ಯಾತಿವೆತ್ತ ಮೀರಾಬಾಯಿ ಇವರ ಶಿಷ್ಯಳು. ಇಂದು ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ ದೆಹಲಿಯಲ್ಲಿ ಅವರ ಜಯಂತಿ ಅದ್ದೂರಿಯಿಂದ ಆಚರಿಸಲಾಗುತ್ತದೆ. ಗುರು ರವಿದಾಸರ ಬೋಧನೆಗಳು, ಪದ್ಯಗಳನ್ನು ಭಕ್ತಿಯಿಂದ ಪಠಿಸಲಾಗುತ್ತದೆ. ರವಿದಾಸ ದುಡಿಯುವ ವರ್ಗದ ಹೆಮ್ಮೆಯಾಗಿ ಸಮಾನತೆಯ ಸಂಕೇತವಾಗಿ ನಿಂತಿದ್ದಾರೆ. ಅಖಂಡ ಮಾನವೀಯತೆ ಸಾರುವ ಅವರ ಸಾಹಿತ್ಯ ಅವರನ್ನು ಜಾಗತಿಕ ಗುರುಸ್ಥಾನದಲ್ಲಿ ನಿಲ್ಲಿಸಿದೆ. ಅವರ ದೋಹೆಗಳನ್ನು ನೋಡಿದಾಗ ಕನ್ನಡದ ಮಾದಾರ ಚೆನ್ನಯ್ಯ, ಮಾದಾರ ಧೂಳಯ್ಯನವರ ವಚನಗಳು ನೆನಪಿಗೆ ಬರದೆ ಇರವು. ಎತ್ತಣ ಕರ್ನಾಟಕ ಎತ್ತಣ ಉತ್ತರ ಪ್ರದೇಶ ಅಂತೆಯೇ ದಕ್ಷಿಣದ ಕನ್ನಡ ಉತ್ತರದ ಬೃಜ್, ಅವಧಿ, ಹಿಂದಿಗೂ ಎತ್ತಣಿಂದ ಎತ್ತಣ ಸಂಬಂಧ!

■ **ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- ಮನುಷ್ಯ ತನ್ನನ್ನು ರಕ್ಷಿಸಿಕೊಳ್ಳಲು ಬಯಸುತ್ತಿದ್ದುದು ಕೊನೆಗೂ ಇನ್ನೊಬ್ಬ ಮನುಷ್ಯನಿಂದ.

  —ಯಶವಂತ ಚಿತ್ತಾಲ
- ಮಗುವನ್ನು ಚಂದ ಇದೆ ಎಂದು ನಾನು ಪ್ರೀತಿಸುವುದಿಲ್ಲ. ಅದರಲ್ಲಿ ಪ್ರೀತಿ ಉಕ್ಕಿಸುವ ಗುಣವರ್ತನೆಗಳು ಇರುವುದರಿಂದ.

  —ರವೀಂದ್ರನಾಥ ಟ್ಯಾಗೋರ್
- ಮತ ನಮಗೊಂದು ದೊಡ್ಡ ಬಂಧನವಾಗಿದೆ. ನಾಡಿನ ಏಳ್ಗೆಯ ಕುತ್ತಿಗೆಗೆ ಉರುಳಾಗಿದೆ.

  —ಕುವೆಂಪು
- ಯಶಸ್ಸಿನ ಗುಟ್ಟು ಏನು ಗೊತ್ತೆ? ಹಿಡಿದ ಕೆಲಸವನ್ನು ಬಿಡದಿರುವುದು.

  —ಗ್ಲೇಡರ್
- ಪುಸ್ತಕ ಪಾಂಡಿತ್ಯಕ್ಕಿಂತ, ಅನುಭವಕ್ಕೆ ಹೆಚ್ಚಿನ ಬೆಲೆ.

  —ಕ್ಯಾಡ್ಮನ್
- ಅನುಭವವಿರುವಲ್ಲಿ ಅಮೃತವಿದೆ.

  —ಭಾರತೀಯ ಗಾದೆ
- ಅನುಭವ ಎಂಬ ಗುರುವಿಗೆ ನಾವು ಸಲ್ಲಿಸಬೇಕಾಗಿರುವ ದಕ್ಷಿಣೆ ಅಪಾರ.

  —ಫ್ರಾಂಕ್ಲಿನ್
- ಅನುಭವವೊಂದು ಅಮೂಲ್ಯ ಅಪೂರ್ವ ವಜ್ರ. ಅದಕ್ಕಾಗಿ ಎಷ್ಟೋ ಜನರು ಬೆವರು, ರಕ್ತ ಸುರಿಸಿದ್ದಾರೆ.

  —ಶೇಕ್ಸ್‌ಪಿಯರ್